ಹಾರಿಬಿಡುತ್ತದೆ. ಇನ್ನು ಅಧ್ಯಯನ ಮಾಡುವುದೇನನ್ನು? ಅಷ್ಟು ಮಾತ್ರವಲ್ಲದೆ ಮನಸ್ಸಿನ ಸ್ಥಿತಿಯೆಂಬುದು ಕೂಡ ಒಂದೇ ಸಮನಾಗಿರುವುದಿಲ್ಲ. ಅದರಲ್ಲಿ ಏರುಪೇರುಗಳು ಉಂಟಾಗುತ್ತಲೇ ಇರುತ್ತವೆ. ಈ ಏರುಪೇರುಗಳ ನಡುವೆಯೂ ಅದನ್ನು ಹತೋಟಿಯಲ್ಲಿಟ್ಟುಕೊಳ್ಳಬೇಕಾಗಿದೆ, ಅದನ್ನು ಅಧ್ಯಯನ ಮಾಡಬೇಕಾಗಿದೆ, ಅದರ ಮೂಲಕ ಅದ್ಭುತಗಳನ್ನು ಸಾಧಿಸಬೇಕಾಗಿದೆ.

ಒಮ್ಮೆ ಇಂದ್ರಜಾಲಿಕನೊಬ್ಬನು ತನ್ನ ಚಮತ್ಕಾರಗಳನ್ನು ದೊಡ್ಡದೊಂದು ಜನಸ್ತೋಮದ ನಡುವೆ ಪರಮಾದ್ಭುತವಾಗುವಂತೆ ಪ್ರದರ್ಶಿಸುತ್ತಿದ್ದನು. ಅಂದಿನ ಸಿಲೋನಿನ ಗೌರ್ನರ್ ಮೊದಲಾದ ಗಣ್ಯರು ಮುಂಚೂಣಿಯಲ್ಲಿ ಕುಳಿತು ಅದನ್ನೆಲ್ಲ ವೀಕ್ಷಿಸುತ್ತಿದ್ದರು. ಆ ಮಂತ್ರವಾದಿಯು ಮಾಡಿದ ಚಮತ್ಕಾರಗಳಲ್ಲಿ ಹುಡುಗಿಯೊಬ್ಬಳನ್ನು ಗಾಳಿಯಲ್ಲಿ ತೇಲುವಂತೆ ಮಾಡಿದ್ದು ಅಚ್ಚರಿಯನ್ನುಂಟುಮಾಡುವಂತಿತ್ತು. ಆ ಪ್ರದರ್ಶನದಲ್ಲಿ ಒಬ್ಬ ಹುಡುಗಿಯನ್ನು ಪದ್ಮಾಸನದ ಭಂಗಿಯಲ್ಲಿರುವಂತೆ ಒಂದು ಸ್ಟೂಲಿನ ಮೇಲೆ ಎತ್ತಿಕೂರಿಸಿದರು. ಆ ಸ್ಟೂಲಾದರೋ ಹಲವಾರು ಕೋಲುಗಳನ್ನು ತಾತ್ಕಾಲಿಕವಾಗಿ ಜೋಡಿಸಿ ಮಾಡಿದುದಾಗಿತ್ತು. ಆಮೇಲೆ ಇಂದ್ರಜಾಲಿಗಳು ಚಮತ್ಕಾರದ ಮಾತುಗಳನ್ನಾಡುತ್ತ, ಆ ಸ್ಟೂಲಿನ ಒಂದೊಂದೇ ಕೋಲನ್ನು ಬಿಡಿಸಿ ಹೊರಕ್ಕಿಡಲು ಪ್ರಾರಂಭಿಸಿದರು. ಹಾಗೆ ಎಲ್ಲ ಕೋಲುಗಳನ್ನೂ ತೆಗೆದಮೇಲೆ, ಹುಡುಗಿಯು ಕುಳಿತಿದ್ದ ಸ್ಟೂಲು ಎಂಬ ವಸ್ತು ಅಲ್ಲಿ ಉಳಿಯಲೇ ಇಲ್ಲ. ಆದರೂ ಆ ಹುಡುಗಿ ನೆಲಕ್ಕೆ ಬೀಳದೆ ಯಾವ ಆಧಾರವೂ ಇಲ್ಲದೆ, ಮಧ್ಯ ಆಕಾಶದಲ್ಲಿ ತೇಲುತ್ತಿದ್ದಳು. ಅದನ್ನು ನೋಡುತ್ತಿದ್ದ ಗೌರ್ನರ್ ಮಹಾಶಯರು ವಿಸ್ಮಯಾಭಿಭೂತರಾಗಿಬಿಟ್ಟರು. ಇಲ್ಲಿ ಏನಾದರೂ ಕಣ್ಣುಕಟ್ಟು ಇದೆಯೋ, ಮಂಕುಬೂದಿ ಎರಚಿದ್ದು ಇದೆಯೋ ನೋಡೋಣವೆಂದು ಗೌರ್ನರನು ಗಕ್ಕನೆ ಮೇಲೆದ್ದು, ತನ್ನ ಸೊಂಟದಲ್ಲಿದ್ದ ಖಡ್ಗವನ್ನು ಒರೆಯಿಂದ ಹಿರಿದು, ತೇಲುತ್ತಿದ್ದ ಹುಡುಗಿಯ ಕೆಳಗೆ ವೇಗವಾಗಿ ಅತ್ತಿಂದಿತ್ತ ಬೀಸಿದನು. ಅಲ್ಲಿ ಯಾವ ಆಧಾರವೂ ಇರಲಿಲ್ಲ. ಖಡ್ಗವು ಕೂಡ ಆಕಾಶದಲ್ಲಿಯೇ ಅಡ್ಡಾಡಿತು. "ಇದು ಮಾಯೆಗೀಯೆ ಅಲ್ಲ. ಆದರೂ ವಿಚಿತ್ರ, ಹೇಗೆ ಅರ್ಥಮಾಡಿಕೊಳ್ಳಬೇಕೋ ತಿಳಿಯದು" ಎಂದು ಉದ್ಗರಿಸಿದನು. ಆಮೇಲೆ ಇಂದ್ರಜಾಲಿಗನನ್ನು ಕುರಿತು, "ಭಲೇ ಭೇಷ್. ಒಳ್ಳೆಯ ಚಮತ್ಕಾರಪುರುಷನಯ್ಯಾ ನೀನು" ಎಂದು ಕೊಂಡಾಡುತ್ತಾ ಬೆನ್ನು ಚಪ್ಪರಿಸಿದನು. ಕೊನೆಗೆ ಇಂದ್ರಜಾಲಿಗನು ಆ ಹುಡುಗಿಯ ಕಂಕುಳಿಗೆ ತನ್ನ ಕೈಗಳನ್ನು ಆಧಾರವಾಗಿಕೊಟ್ಟು ಹಿಡಿದುಕೊಂಡಾಗ, ಅವಳು ಪದ್ಮಾಸನವನ್ನು ಬಿಟ್ಟು ನಿಂತುಕೊಂಡಳು.

ನಿಯಮಾನುಸಾರ ಮಾನವನ ಮನಸ್ಸು ಏನನ್ನು ಬೇಕಾದರೂ ಸಾಧಿಸಬಹುದೆಂದು ಈ ಮೇಲಿನ ಚಮತ್ಕಾರ ತೋರಿಸಿಕೊಡುತ್ತದೆ. ಆದರೆ ಇತರ ವಿಜ್ಞಾನಗಳಿಗಿಂತಲೂ ಇಲ್ಲಿ ಮುಂದುವರಿದು ಹೋಗುವುದು ಅತ್ಯಂತ ಕಷ್ಟ. ಒಂದಷ್ಟು ಆಸ್ತಿಪಾಸ್ತಿ ಸಂಪಾದಿಸಬೇಕಾದರೇ ಪಡಬಾರದ ಪಾಡು ಪಡಬೇಕಾಗಿರುವಾಗ, ಇಂತಹ ವಿದ್ಯೆಯನ್ನು ಸಾಧಿಸುವುದೇನು ಸಾಮಾನ್ಯನ ಪಾಲಿಗೆ ಬಿದ್ದಿದೆಯೇ! ವಿದ್ಯುಚ್ಛಕ್ತಿಯ ವಿಜ್ಞಾನವನ್ನು ತಿಳಿಯಬೇಕಾದರೆ, ಇಂಜಿನಿಯರಿಂಗ್ ವಿಷಯವನ್ನು ಕಲಿಯಬೇಕಾದರೆ, ಅದೆಷ್ಟೋ ವರ್ಷಗಳ ಕಾಲ ನಾವು ಹೆಣಗುತ್ತೇವೆ. ಅನಂತರ ಅದನ್ನು ಪ್ರಯೋಗಕ್ಕೆ ತರಬೇಕಾದರೆ, ಅದೆಷ್ಟೋ ಇಡೀ ಜೀವನ ಕಷ್ಟಪಡಬೇಕು! ಕೋಲುಕತ್ತಿಗಳಲ್ಲಿ ಇರುವಷ್ಟೇ ಶಕ್ತಿ ಆತ್ಮನಲ್ಲಿದೆ. ಆ ಶಕ್ತಿಯನ್ನು ಆಧ್ಯಾತ್ಮಿಕ ದಿಕ್ಕಿನಲ್ಲಿ ಹರಿಯಬಿಟ್ಟರೆ, ನಾವು ಈ ಜನ್ಮದಲ್ಲಿಯೇ ಪೂರ್ಣಾತ್ಮರಾಗಿ ಸಂಸಾರದಿಂದ ಮುಕ್ತರಾಗಬಹುದಾಗಿದೆ.

## ಓದುಗರ ವೇದಿಕೆ

**ಪೂ**ಜ್ಯ ಸ್ವಾಮೀಜಿಯವರಿಗೆ ಭಕ್ತಿಪೂರ್ವಕ ಪ್ರಣಾಮಗಳು. ತಾವು ಕಳಿಸಿದ 'ವಿವೇಕಪ್ರಭ' ದ 'ವಿವೇಕಾನಂದ ವಿಚಾರಸುಧೆ' ವಿಶೇಷ ಸಂಚಿಕೆಯ ಪ್ರತಿಗಳು ಕೈಸೇರಿದವು. ವಂದನೆಗಳು. ಸಂಚಿಕೆಯ ಲೇಖನಗಳನ್ನು ಓದುತ್ತಿದ್ದಂತೆ ಪೂಜ್ಯ ವಿವೇಕಾನಂದರ ಜೀವನ-ಚಿಂತನೆಗಳ ವಿಷಯ ನನಗೆ ಎಷ್ಟು ಸ್ವಲ್ಪ ತಿಳಿದಿದೆ ಎನ್ನುವುದು ಅರಿವಾಗುತ್ತ ಹೋಯಿತು. ಇಂತಹ ಅಮೂಲ್ಯ ಪ್ರಕಟಣೆಯನ್ನು ಕನ್ನಡಿಗರ ಕೈಯಲ್ಲಿಟ್ಟ ತಮಗೆ ಮತ್ತು ಸಂಪಾದಕ ಮಂಡಲಿಗೆ ಕೃತಜ್ಞತಾಪೂರ್ವಕ ವಂದನೆಗಳು. ಈ ಸಂಚಿಕೆಯ ಲೇಖನಗಳನ್ನು ಪುಸ್ತಕರೂಪದಲ್ಲಿ ಹೊರತಂದರೆ, ಪೂಜ್ಯ ಸ್ವಾಮೀಜಿಯವರನ್ನು ಕುರಿತ ಒಂದು ವಿಶಿಷ್ಟ ಕೃತಿ ಕನ್ನಡಿಗರಿಗೆ ಲಭ್ಯವಾಗುತ್ತದೆ. – ಎಲ್. ಎಸ್. ಶೇಷಗಿರಿ ರಾವ್, ಬೆಂಗಳೂರು

**ಸ್ವಾ**ಮೀಜಿ ಅವರಿಗೆ ವಂದನೆಗಳು, ಸ್ವಾಮಿ ವಿವೇಕಾನಂದರ ೧೫೦ನೇ ಜನ್ಮೋತ್ಸವದ ಅಂಗವಾಗಿ 'ವಿವೇಕಪ್ರಭ' ಪ್ರಕಟಿಸಿರುವ 'ವಿವೇಕಾನಂದ ವಿಚಾರ ಸುಧೆ' ವಿಶೇಷ ಸಂಚಿಕೆ ತಲುಪಿದ್ದು, ಓದಿ ಸಂತೋಷವಾಯಿತು. ವಿಶೇಷ ಸಂಚಿಕೆಯಲ್ಲಿ ಸ್ವಾಮಿ ವಿವೇಕಾನಂದರ ವ್ಯಕ್ತಿತ್ವದ ನಾನಾ ಮುಖಗಳನ್ನು, ಅವರ ಸಾಧನೆ-ಸಿದ್ಧಿಗಳನ್ನು ಸಮರ್ಪಕವಾಗಿ ಚಿತ್ರಿಸಿರುವ ಲೇಖನಗಳು ಸಂಚಿಕೆಯ ಮೌಲ್ಯವನ್ನು ಹೆಚ್ಚಿಸಿದ್ದು, ಸಂಚಿಕೆ ಸಂಗ್ರಹಯೋಗ್ಯವಾಗಿದೆ.
– ಎಸ್. ಚೆನ್ನಪ್ಪ, ಮೈಸೂರು

**ಮಾ**ನ್ಯರೇ, ಜನವರಿ ತಿಂಗಳ ವಿಶೇಷ ಸಂಚಿಕೆ 'ವಿವೇಕಪ್ರಭ' ವನ್ನು ಓದಿದೆ. ಸಂತೃಪ್ತಿಯಾಯಿತು. ಭಾರತದ ಆಧ್ಯಾತ್ಮಿಕ ಸಾಹಿತ್ಯ ಸರಸ್ವತಿಯ ಶಿರಕ್ಕೆ ತೊಡಿಸಿದ ರತ್ನಖಚಿತ ಕಿರೀಟದಂತೆ ಸಂಚಿಕೆ ಮೂಡಿಬಂದಿದೆ. ಇಲ್ಲಿ ಪ್ರಕಟವಾಗಿರುವ ಎಲ್ಲಾ ಲೇಖನಗಳೂ ವಿದ್ಯಾಸರಸ್ವತಿಯ ಕಿರೀಟದಲ್ಲಿ ಝಗಝಗಿಸುವ ವೈವಿಧ್ಯಮಯ ಮುತ್ತುರತ್ನಗಳಂತೆ ನನಗೆ ಗೋಚರಿಸಿದವು. ವಿವೇಕಾನಂದರ ಜೀವನ, ಸಾಧನೆ, ಸಿದ್ಧಿ, ಬೋಧನೆಗಳನ್ನು ಅರಿತ ಪ್ರಾಜ್ಞರಿಗೂ, ವಿವೇಕಾನಂದ ಸಾಹಿತ್ಯವನ್ನು ಅರೆದು ಕುಡಿದು ಅರಗಿಸಿಕೊಂಡ ಪಂಡಿತರಿಗೂ ಕೂಡ ಇಲ್ಲಿನ ವಿಚಾರಗಳಲ್ಲಿರುವ ಒಳನೋಟಗಳು ಚಿಂತನ ಮಂಥನಕ್ಕೆ ಗ್ರಾಸ ಒದಗಿಸುವಂತಿವೆ. ಪ್ರತಿದಿನವೂ ದೇವರ ಚಿತ್ರಪಟದ ಮುಂದೆ ಕುಳಿತು ಮಂತ್ರೋಚ್ಚಾರಗಳೊಂದಿಗೆ ಪೂಜಾ ವಿಧಿಗಳನ್ನು ಆಚರಿಸುವುದರ ಜೊತೆಗೆ ಅನುದಿನವೂ ಇಂತಹ ವಿಚಾರಪೂರ್ಣ ಲೇಖನಗಳನ್ನು ಓದಿಕೊಂಡು, ಏಕಾಗ್ರತೆಯಿಂದ ಅವುಗಳ ಸಾರಸಂಗ್ರಹವನ್ನು ಮನನ ಮಾಡಿಕೊಳ್ಳುತ್ತಿದ್ದರೆ, ನಮ್ಮ ಜೀವನವನ್ನು ಸಂಪೂರ್ಣವಾಗಿ ಆಧ್ಯಾತ್ಮಿಕತೆಯೆಡೆಗೆ ತಿರುಗಿಸಲು ಸಾಧ್ಯವಿದೆ.
– ಕೆ. ರಾಮಮೂರ್ತಿರಾವ್, ಮೈಸೂರು